# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ. 655-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹದೇವ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 21-07-2023. |

**ಪಾಟೀ ಸವಾಲುಃ ಶ್ರೀ ಡಿ.ಎಂ.ಜಿ ವಕೀಲರಿಂದಃ**

ನಾನು ಅವಿದ್ಯಾವಂತ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಅದು ಸುಳ್ಳು. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ನನ್ನ ತಾತನವಾದ ಸುಬ್ಬನವರಿಗೆ ಸೇರಿದ್ದಾಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಾತನವರಿಗೆ ಸೇರಿತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರು ಪಡಿಸಿರುವ ದಾಖಲಾತಿಗಳು ನನ್ನ ತಂದೆ ಹೆಸರಿನಲ್ಲಿ ಇರುತ್ತದೆ. ನನ್ನ ತಾತನವರ ಹೆಸರಿನಿಂದ ನನ್ನ ತಂದೆ ಹೆಸರಿಗೆ ಯಾವಾ ಖಾತೆ ಆಯಿತು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತನವರಿಗೆ ಒಟ್ಟು 4 ಜನ ಮಕ್ಕಳಿದ್ದು ಅವರುಗಳ ಪೈಕಿ ಹೊರಟು ಹೋಗಿರುತ್ತಾರೆ.

2. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಮನೆ ಕಟ್ಟಿರುವುದಿಲ್ಲ. ಆದರೆ ಹಳೆ ಮನೆ ಇರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ ಹೇಳಬಲ್ಲೆ ಪೂ-ಪ.9 ಅಡಿ, ಉ-ದ.45 ಅಡಿಗಳು ಇರುತ್ತೆ. ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆಃ- ಪ್ರಕಾಶ್ ರವರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆಃ-ರಸ್ತೆ ನಂತರ ಗುರುಮಲ್ಲಪ್ಪನವರ ಸ್ವತ್ತು, ಉತ್ತರಕ್ಕೆಃ-ಮಲ್ಲಪ್ಪನ ನವರ ಸ್ವತ್ತು ಹಾಗೂ ದಕ್ಷಿಣಕ್ಕೆಃ- ರಸ್ತೆ ಇದ್ದು ಅನಂತರ ಶಾಲೆ ಇರುತ್ತದೆ. ನಮ್ಮ ಮತ್ತು ಪ್ರಕಾಶ್ ರವರ ಮನೆಯ ಒಂದು ಗಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಗಲ್ಲಿಯು 9 ಅಡಿ ಅಗಲ ಮತ್ತು 45 ಅಡಿ ಉದ್ದವಿರುತ್ತದೆ. ಪ್ರಕಾಶ್ ರವರ ಅಜ್ಜಿರವರ ಹೆಸರು ಸಾಕಮ್ಮ ಎಂದರ ಸರಿ. ಅವರ ಪರಿಚಯ ನನಗೆ ಇರುತ್ತದೆ. ಸಾಕಮ್ಮನವರಿಗೆ ಸೇರಿದ ಸ್ವತ್ತು ಅವರ ಮರಣಾ ನಂತರ ಪ್ರತಿವಾದಿಗಳಿಗೆ ಸೇರಿದ್ದು, ಪ್ರತಿವಾದಿಗಳು ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ವಾಸವಿರುತ್ತೇನೆ ಎಂದು ನುಡಿಯುತ್ತಾರೆ.

ಸಾಕಮ್ಮನವರು ಅವರ ಜೀವಿತ ಕಾಲದಲ್ಲಿ ಗಲ್ಲಿಯನ್ನು ಬಿಟ್ಟು ಆನಂತರ ಮನೆ ಕಟ್ಟಿದ್ದರು. ಗಲ್ಲಿಯೂ ನನಗೆ ಮತ್ತು ಪ್ರತಿವಾದಿಗಳಿಗೆ ಸೇರಿದ್ದು ನಾನು, ಪ್ರತಿವಾದಿಗಳು ಮತ್ತು ಸಾರ್ವಜನನಿಕರು ಓಡಾಡುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಗಲ್ಲಿಯೂ ನನಗೆ ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ.

3. ಸಾಕಮ್ಮನವರು ಅವರ ಜೀವಿತ ಕಾಲದಲ್ಲಿ ದಿ.21-07-1975 ರಂದು ಕಾರ್ಯನಿರ್ವಾಹಕ ಅಧಿಕಾರಿ ರವರ ಮುಖೇನ ನನ್ನ ತಂದೆಗೆ ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ. ಆ ಸಮಯ ಕಾರ್ಯನಿರ್ವಾಹಕ ಅಧಿಕಾರಿ ರವರು ಸ್ಥಳಕ್ಕೆ ಬಂದು ಗಲ್ಲಿಯೂ ಸಾಕಮ್ಮನವರಿಗೆ ಸೇರಿದ್ದು  ಯಾವುದೇ ರೀತಿಯ ಘರ್ಷಣೆ ಉಂಟಾಗಬಾರದು ಎಂದು ನಾವು ಮತ್ತು ಸಾಕಮ್ಮನವರು ತಿರುಗಾಡಲು ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ನಾವು ಸತ್ಯಾಂಶವನ್ನು ಮರೆಮಾಚಿ ಪ್ರತಿವಾದಿಗಳಿಗೆ ಸೇರಬೇಕಾದ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

4. ದಿ.13-09-2014 ರಂದು ನನ್ನ ತಂದೆಯವರು ಸ್ಥಳ ಪರಿಶೀಲನೆ ಮಾಡುವಂತೆ ಪಂಚಾಯ್ತಿ ರವರಿಗೆ ಅರ್ಜಿ ನೀಡಿದ್ದರು ಎಂದರೆ ಸರಿ. ದಿ.25-09-2014 ರಂದು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರು ಸ್ಥಳಕ್ಕೆ ಬಂದು ನನ್ನ ತಂದೆಯ ಅರ್ಜಿಯ ಮೇರೆಗೆ ಸ್ಥಳ ಪರಿಶೀಲನೆ ಮಾಡಿ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿ.27-07-1998 ರಂದು ಗ್ರಾಮ ಪಂಚಾಯ್ತಿಯಲ್ಲಿ ಸಭೆ ಸೇರಿ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಹೆಸರಿಗೆ ಖಾತೆ ಮಾಡದಂತೆ ತೀರ್ಮಾನಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪಂಚಾಯ್ತಿ ಕಾರ್ಯದರ್ಶಿ, ಅಧ್ಯಕ್ಷರು, ಸದಸ್ಯರು ಮತ್ತು ಸಾರ್ವಜನನಿಕರು ಸೇರಿ ನಮ್ಮ ಮತ್ತು ಪ್ರತಿವಾದಿಗಳು ನಡುವೆ ಘರ್ಷಣೆ ಉಂಟಾಗಬಾರದು ಎಂದು ದಾವಾ ಷೆಡ್ಯೂಲ್ ಸ್ವತ್ತನ್ನು ಗಲ್ಲಿಯಾಗಿ ಪರಿವರ್ತಿಸಿ ಆದೇಶಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಸ್ಥಳ ಪರಿಶೀಲನೆ ಮಾಡಿ ಮಹಜರ್ ತಯಾರು ಮಾಡಿದ ಸಮಯ ಸದರಿ ಮಹಜರ್‌ಗೆ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಗ್ರಾಮಸ್ಥರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತನ್ನು ಅಕ್ರಮವಾಗಿ ಕಬಳಿಸುವ ಉದ್ದೇಶದಿಂದ ನಾವುಗಳು ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳನ್ನು ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿ ಇರುವುದಿಲ್ಲ, ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮಗೆ ಯಾವುದೇ

ಹಕ್ಕಾಗಲಿ, ಅಧಿಕಾರವಾಗಲಿ, ಸ್ವಾಧೀನವಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/ –**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**